ಅರ್ಥವಾಯಿತು. ದುಷ್ಯಂತ–ಶಕುಂತಲೆಯರ ಪೌರಾಣಿಕ ಕಥೆಯ ಹಿನ್ನೆಲೆಯ ಕಥೆಯಲ್ಲಿ ಬೇಟ್ಟಿ ಕಾಡಿಗೆ ಚಾರಣಕ್ಕೆ ಬಂದಿದ್ದ ಯುವಕನ ಮೋಹ ಪಾಶಕ್ಕೆ ಸಿಲುಕಿದ ಮುಗ್ಧ ಹುಡುಗಿ ಪ್ರಿಯಕರನ ಕರೆಗೆ ಹೋಗಲಾರದೆ ಕಾಡು ಮನೆಯಲ್ಲಿ ಒಂಟಿ ತಾಯಿಯನ್ನು ಬಿಟ್ಟು ಹೊರಡಲಾಗದ ನರಳಾಟದಲ್ಲಿ ನಿಗೂಢವಾಗಿ ಅದೃಶ್ಯವಾಗುವ ವಸ್ತು ನಿರೂಪಣೆ ಇತ್ತು. ಕಥೆಯಲ್ಲಿ ಚಿತ್ರಿತವಾದ ಮನೆ, ಪಾತ್ರಗಳ ಹೆಸರನ್ನು ಸದಾನಂದ ಹಾಗೆಯೇ ಬಳಸಿದ್ದ. ಉತ್ತಮ ಪುರುಷ ನಿರೂಪಕ ಸ್ವತಃ ಸದಾನಂದನೇ ಎಂದು ಬಾಬಣ್ಣ ನಂಬಿದ್ದ. ಹಾಗಾಗಿ ಅದೊಂದು ಆತ್ಮವೃತ್ತಾಂತದ ಅನುಭವ ಕಥನ ಎಂಬುದನ್ನು ಬಾಬಣ್ಣ ಮಾತ್ರವಲ್ಲದೆ ಮಂಚಿಕೇರಿಯ ಸಾಹಿತ್ಯಾಸಕ್ತರೂ ಮುಗ್ಧವಾಗಿ ನಂಬಿದ್ದರು. ಸದಾನಂದನೂ ವಾಸ್ತವತೆಯಿಂದ ಅದೆಷ್ಟು ಪೀಡಿತನಾಗಿದ್ದನೆಂದರೆ ಏನನ್ನೂ ಬದಲಿಸುವುದು ಸಾಧ್ಯವಿರಲಿಲ್ಲ.

ಕಥಾವಸ್ತುವನ್ನು ಸದಾನಂದನ ವಿರುದ್ಧ ಪ್ರತಿ ಅಸ್ತ್ರವನ್ನಾಗಿ ಪ್ರಯೋಗಿಸಲು ಬಾಬಣ್ಣನಿಗೆ ಸುಲಭವಾಯಿತು. 'ಹರಿಗದ್ದೆಯ ಹುಡುಗಿ'ಯ ಪ್ರತಿಯೊಂದಿಗೆ ಬುಲೆಟ್ ಓಡಿಸಿದ. ಅಂದು ಮುಸ್ಸಂಜೆ ಜರುಗಿದ ಅವಮಾನದ ಪ್ರಸಂಗ ಅವನನ್ನು ಕಾಡಿದಂತಿರಲಿಲ್ಲ. ಏನೂ ನಡೆದೆ ಇಲ್ಲ ಎಂಬಂತೆ ಹೊಸ ಮನುಷ್ಯನಾಗಿ ಹರಿಗದ್ದೆಗೆ ಹೋಗಿದ್ದ. ಕಾಡಿನ ಮಧ್ಯ ಅವನಿಗೆ ಸಂಪದಳ ಸ್ಕೂಟಿ ಎದುರಾಯಿತು. ಹಿಂದಿನ ಸೀಟಿನ ಮೇಲೆ ಚೆನ್ನಮ್ಮನ ವೀರಗಚ್ಚೆ ಹಾಕಿ ಕೂತಿದ್ದ ಮಾಲತಿ ಸರ್ರನೆ ಇಳಿದಳು. ಬಾಬಣ್ಣ ಬುಲೆಟ್‌ಗೆ ಸ್ಟ್ಯಾಂಡ್ ಹಾಕಿ ರಸ್ತೆ ಪಕ್ಕ ನಿಲ್ಲಿಸಿ ಬಂದ. ರಸ್ತೆಯಾಚೆ ಪಾಳು ಗದ್ದೆಯಲ್ಲಿ ಯಾರದೊ ಗುಡಿಸಲಿತ್ತು. ಅರ್ಧಪ್ರಾಯದ ಹೆಂಗಸರಿಬ್ಬರು ಅವರ ನದರಿಗೆ ಅಡ್ಡ ಬಂದ ಗಿಡಗಳನ್ನು ತಪ್ಪಿಸಿ ನೂಕುತ್ತಿರುದನ್ನು ಗಮನಿಸಿ, "ಗಾಡಿ ಬಿಡೆ" ಎಂದು ಮಾಲತಿ ಸನ್ನೆ ಮಾಡಿ ಚಡಪಡಿಸಿದಳು. "ನಾನು ಹೆಚ್ಚು ಮಾತಾಡೋದಿಲ್ಲ. ನಿಮ್ಮ ಜಮೀನ ಮಾರಾಟ ಸುಸೂತ್ರ ಆಗೊ ಲಕ್ಷಣ ಕಾಣ್ತಿಲ್ಲ. ಗಣೇಶಪಾಲ್ ಒಡ್ಡು ಕಟ್ತಾರೆ ಎಂದು ಸುದ್ದಿ ಆದ್ಮೇಲೆ ಯಾರೂ ಕಾಯಾಸ ಮಾಡ್ತಿಲ್ಲ. ಮತ್ತೊಂದು ವಿಷಯಾ ಕೇಳಿದ್ರಾ. ಈ ಪುಸ್ತಕದ ಕಥೆ ಓದಿ ಎಲ್ಲ ಹಕೀಕತ್ ಗೊತ್ತಾಗ್ತದೆ. ಬೆಂಗಳೂರಿಂದ ಸದಾನಂದ ತನ್ನ ಎಂಜಿನಿಯರ್ ಗೆಳಯನ ಕರ್ಕಂಡು ಬಂದಿದ್ದ ನೋಡಿ ಅಂವ ನಿಮ್ಮ ಮಗ್ಳ ಲಗ್ನ ಮಾಡ್ಕಂಡು ಇಲ್ಲೇ ಉಳಿಯೋದಕ್ಕೆ ಪ್ಲ್ಯಾನ್ ಮಾಡಿದ್ನಂತೆ. ಯಾವಾಗ ಈ ಪುಸ್ತಕದ ಕಥೆ, ಮಂಚಿಕೇರಿ ಪ್ಯಾಟೇಲಿ ಗುಲ್ಲಾದ ಸುದ್ದಿ ಕೇಳಿದ್ನೊ ಅದೇ ದಿನ ತಾಬಡತೋಬ ಹೊರಟು ಹೋದ. ಮೊನ್ನೆ ಮೊನ್ನೆ ಬಂದ ಸದಾನಂದನಿಗೆ ರಾಜಕೀಯ ಯಾಕೆ ಬೇಕಿತ್ತು?" ಎಂದವನೆ ಬುಲೆಟ್ ತಿರುಗಿಸಿ ಮಾಯವಾದ. "ಐ ಡೊಂಟ್ ಕೇರ್" ಎಂದವಳೆ ಸಂಪದ ಸ್ಕೂಟಿ ಚಾಲೂ ಮಾಡಿದಳು.

ಸದಾನಂದನ ಕಥೆಗೆ ಸಂವಾದಿಯಾಗಿ ಮಂಚಿಕೇರಿಯ ಪೇಟೆಯಲ್ಲಿ ರಾಸೊರಾಸಾಗಿ ಇನ್ನಂದು ಕಥಾವೃತ್ತಿ ಓಡಾಡತೊಡಗಿತು. ಈ ಕಥೆಯನ್ನು ಕಟ್ಟಿ ಹರಿದಾಡಲು ಬಿಟ್ಟವರು ಯಾರೆಂದು ಖಚಿತವಾಗಿ ಗೊತ್ತಿಲ್ಲದಿದ್ದರೂ ಅನೇಕರಿಗೆ ಬಾಬಣ್ಣನ ಮೇಲೆ ಅನುಮಾನ. ಸದಾನಂದ ಮಂಚಿಕೇರಿಗೆ ಬಂದಿರುವ ಉದ್ದೇಶ ಹರಿಗದ್ದೆಯನ್ನು ಖರೀದಿಸಿ, ಸಂಪದಳನ್ನು ಮದುವೆಯಾಗುದಾಗಿತ್ತಂತೆ. ಇಲ್ಲವಾದಲ್ಲಿ ಎಂದೊ ಬರೆದು ಮರೆತ ಕಥೆಗೆ ಮರು ಜೀವ ಕೊಡುವ ಕಾರಣ ಏನಿತ್ತು? ಎಂದು ಮಂಚಿಕೇರಿ ಪೇಟೆ ಹುನ್ನಾರವನ್ನು ಹುಡುಕಲು ತೊಡಗಿತು. ಒಡ್ಡುಕಟ್ಟುವ ವದಂತಿ ಮತ್ತು ಸಂಪದಳ ಪ್ರೇಮ ಕಥಾಪ್ರಸಂಗ ಮಾಲತಿಯನ್ನು ಒತ್ತಡದಲ್ಲಿ ಸಿಲುಕಿಸುವ ಸಂಚಲ್ಲದೆ ಮತ್ತೇನು? ಬಾಬಣ್ಣನಿಂದ ಕಥಾಪುಸ್ತಕವನ್ನು ಇಸಿದುಕೊಂಡು ಅದೊಂದು ಅದ್ಭುತ ಪ್ರೇಮಪತ್ರವೆಂಬಂತೆ ಓದಿದರು.